**SC No. 9/2024**
**PW-4**

# 4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು.

**ಎಸ್. ಸಿ. 9/2024**

| | | |
|---|---|---|
| ಸಾಕ್ಷಿದಾರರ ಹೆಸರು | ಮಹೇಂದ್ರ | ಪ್ರಮಾಣ ವಚನ ಮಾಡಿದ ದಿನಾಂಕ: 07.08.2026 |
| ತಂದೆಯ/ಗಂಡನ ಹೆಸರು | ನಂಜ | |
| ವಯಸ್ಸು | 36 ವರ್ಷ | |
| ವೃತ್ತಿ | ಆಟೋ ಚಲಾಕ | ಪ್ರಾ.ಸಾಃ 4 |
| ವಾಸ ಸ್ಥಳ | ಪಡುವಾರಹಳ್ಳಿ, ಮೈಸೂರು | ಚಾ.ಸಾಃ 1 |

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕ ರಿಂದ:**

ಆರೋಪಿತರ ಪರಿಚಯ ಇಲ್ಲ. ಚಾಸಾ–2 ರಿಂದ 6 ರವರು ಗೊತ್ತಿಲ್ಲ. ಆರೋಪಿಗಳಿಗೂ ನನಗೂ ಯಾವುದೇ ಮನಸ್ತಾಪ ಇರಲಿಲ್ಲ. ಮೊಬೈಲ್ ವಿಚಾರವಾಗಿ ಆರೋಪಿತರು ನನಗೆ ಕರೆ ಮಾಡಿ ಮಾತನಾಡಲು ಕರೆದಿಲ್ಲ. ಈ ಸಂಬಂಧ ನಾನು ಶನಿಮಾಹತ್ಮ ದೇವಸ್ಥಾನದ ಬಳಿ ಹೋಗಿಲ್ಲ. ಆರೋಪಿತರು ಒಂದು ರಾಡನ್ನು ತೆಗೆದುಕೊಂಡು ನನಗೆ ಹೊಡೆದಿಲ್ಲ. ನನಗೆ ಜ್ಞಾನ ಇಲ್ಲದೇ ಇರುವುದರಿಂದ ನನಗೆ ಯಾರು ಹಲ್ಲೆ ಮಾಡಿದರು ಎಂದು ಗೊತ್ತಿಲ್ಲ. ಆಸ್ಪತ್ರೆಯಲ್ಲಿ ಪೊಲೀಸರು ಖಾಲಿ ಹಾಳೆ ಗೆ ನನ್ನ ಸಹಿ ಪಡೆದುಕೊಂಡಿರುತ್ತಾರೆ. ಸಾಕ್ಷಿಯು ಹೇಳಿಕೆ ದೂರಿನಲ್ಲಿರುವ ಸಹಿಯನ್ನು ನೋಡಿ ಗುರುತಿಸಿದ್ದು ದೂರನ್ನು ನಿಪಿ–3 ಎಂದು ಸಾಕ್ಷಿದಾರರ ಸಹಿಯನ್ನು ನಿಪಿ–3(ಎ) ಎಂದು ಗುರುತಿಸಲಾಯಿತು. ನಿಪಿ–3 ರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ. ಸಾಕ್ಷಿದಾರರು ಬಟ್ಟೆ ಅಮಾನತ್ತು ಮಹಜರ್ ನಲ್ಲಿರುವ ತನ್ನ ಸಹಿ ನೋಡಿ ಗುರುತಿಸಿದ್ದು ಮಹಜರ್ ಅನ್ನು ನಿಪಿ–4 ಎಂದು ಸಾಕ್ಷಿದಾರರ ಸಹಿಯನ್ನು ನಿಪಿ–4(ಎ) ಎಂದು ಗುರುತಿಸಲಾಯಿತು.

ನಿಪಿ-4 ರಲ್ಲಿ ಬರೆದಿರುವ ವಿಷಯಗಳು ನನಗೆ ಗೊತ್ತಿಲ್ಲ. ನ್ಯಾಯಾಲಯದ ಮುಂದೆ ಹಾಜರುಪಡಿಸಿರುವ ಬಟ್ಟೆಗಳು ಯಾರಿಗೆ ಸಂಬಂಧಪಟ್ಟವು ಎಂದು ನನಗೆ ಗೊತ್ತಿಲ್ಲ.

**ಈ ಹಂತದಲ್ಲಿ , ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದ್ದಾರೆ. ಸಾಕ್ಷಿಯ ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.**

**ಪಾಟೀ ಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕ ರಿಂದ:**

ದಿನಾಂಕ 26.07.2022 ರಂದು ರಾತ್ರಿ 10.15 ಗಂಟೆಗೆ ಆರೋಪಿತರು ಗಿರವಿ ಇಟ್ಟುಕೊಂಡಿದ್ದ ಮೊಬೈಲ್ ಅನ್ನು ಕೊಡುತ್ತೇವೆ ಎಂದು ಶನಿಮಹಾತ್ಮ ದೇವಸ್ಥಾನದ ಬಳಿ ಕರೆಸಿಕೊಂಡು ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ ಎಂದರೆ ಸರಿಯಲ್ಲ. 1 ಮತ್ತು 2 ನೇ ಆರೋಪಿತರು ಲಾಂಗ್ ನಂತೆ ಇರುವ ಮಚ್ಚುಗಳಿಂದ ಚಾಸಾ-2 ರವರನ್ನು ಕೊಲೆ ಮಾಡುವ ಉದ್ದೇಶದಿಂದ ಬೀಸಿದ್ದು ಚಾಸಾ-2 ರವರು ತಪ್ಪಿಸಿಕೊಂಡ ನಂತರ 1 ನೇ ಆರೋಪಿತರು ನನ್ನ ಬಲ ತೊಡೆಗೆ ಲಾಂಗ್ ನಂತೆ ಇರುವ ಮಚ್ಚಿನಿಂದ ಹೊಡೆದಿರುತ್ತಾರೆ ಎಂದರೆ ಸರಿಯಲ್ಲ. ನಾನು ನೆಲದ ಮೇಲೆ ಕುಸಿದು ಬಿದ್ದ ನಂತರ 2 ನೇ ಆರೋಪಿ ಮಚ್ಚಿನ ಹರಿತವಲ್ಲದ ಕಡೆಯಿಂದ ನನ್ನ ಬಲ ಮಂಡಿ ಮೇಲ್ಭಾಗದ ತೊಡೆಗೆ ಹೊಡೆದು ಮೂಳೆ ಮುರಿದಿರುತ್ತಾರ ಎಂದರೆ ಸರಿಯಲ್ಲ. ನನ್ನನ್ನು ಕೊಲೆ ಮಾಡುವ ಉದ್ದೇಶದಿಂದ ಆರೋಪಿತರು ಮಚ್ಚಿನಿಂದ ಒಂದೊಂದು ಏಟು ಹೊಡೆದು ಮಾರಣಾಂತಿಕ ಹಲ್ಲೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಕೊಲೆ ಬೆದರಿಕೆ ಹಾಕಿರುತ್ತಾರೆ ಎಂದರೆ ಸರಿಯಲ್ಲ.

ದಿನಾಂಕ 27.07.2022 ರಂದು ಸಂಜೆ 4.30 ರಿಂದ 5.15 ಗಂಟೆ ಸಮಯದಲ್ಲಿ ಚಾಸಾ-8 ಮತ್ತು 9 ರವರ ಸಮಕ್ಷಮ ಮತ್ತು ವೈದ್ಯರ ಸಮಕ್ಷಮ ನಿಪಿ-4 ರಂತೆ ಬಟ್ಟೆಗಳನ್ನು ಅಮಾನತ್ತು ಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಎಂ.ಒ 1 ಮತ್ತು 2

ಬಟ್ಟೆಗಳು ನನಗೆ ಸೇರಿದವು ಎಂದರೆ ಸರಿಯಲ್ಲ. ಚಾಸಾ–2 ರವರಿಗೂ ನನ್ನ ಮುಂದೆಯೇ ಹಲ್ಲೆ ಮಡಲು ಪ್ರಯತ್ನಿಸಿದ್ದಾರೆ ಎಂದರೆ ಸರಿಯಲ್ಲ.

ನನಗೆ ಪ್ರಕರಣದ ಬಗ್ಗೆ ಎಲ್ಲಾ ಮಾಹಿತಿ ಗೊತ್ತಿದ್ದರೂ ಸಹ ಆರೋಪಿತರೊಂದಿಗೆ ರಾಜಿ ಆಗಿ ಅವರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದ :**

**ಆರೋಪಿತರ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ನುಡಿದಿರುತ್ತಾರೆ.**

**ಮರವಿಚಾರಣೆಃ ಇಲ್ಲ**

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಎ ಒ

**4 ನೇ ಅಪರ ಜಿಲ್ಲಾ ಮತ್ತು ಸತ್ರ**
**ನ್ಯಾಯಾಧೀಶರು, ಮೈಸೂರು.**